## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಲೆಕ್ಕಶೀರ್ಷಿಕೆ:4202-01-201-1-06-133ರಡಿ ರೂ.5000.00 ಲಕ್ಷಗಳ ಅನುದಾನದ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-
1. 2022-23ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿಗದಿ ಪಡಿಸಿದ ಅನುದಾನ.
2. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಕಡತ ಸಂಖ್ಯೆ: EP/256/YSK/2022, ದಿನಾಂಕ:06.01.2023.
3. ಯೋಜನಾ ಇಲಾಖೆಯ ಕಡತ ಸಂಖ್ಯೆ: ಪಿಡಿಎಸ್ 49 ಎಸ್‌ಡಿಪಿ 2022ರ ಕಂಡಿಕೆ-30ರಲ್ಲಿ ಅನುಮೋದಿಸಿರುವಂತೆ.

******

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಇಲಾಖೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.300070.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ 10 ಕಾರ್ಯಕ್ರಮಗಳಿಗೆ ರೂ.44300.00 ಲಕ್ಷಗಳು ನಿಗದಿಯಾಗಿರುತ್ತದೆ. ಈ ಪೈಕಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಲೆಕ್ಕಶೀರ್ಷಿಕೆ: 4202-01-201-1-06-133ರಡಿ ರೂ.5000.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ.

ಮೇಲೆ ಓದಲಾದ (2)ರಲ್ಲಿ 2022-23ನೇ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ & ಪ್ರೌಢ ಶಿಕ್ಷಣ ಇಲಾಖೆಯ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಲೆಕ್ಕಶೀರ್ಷಿಕೆ: 4202-01-201-1-06-133ರಡಿ ರೂ.5000.00 ಲಕ್ಷಗಳಲ್ಲಿ, 38 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ 40 ಕರ್ನಾಟಕ ಪಬ್ಲಿಕ್ ಶಾಲೆ(ಕೆ.ಪಿ.ಎಸ್)ಗಳಿಗೆ ಮೂಲ ಭೂತ ಸೌಕರ್ಯಗಳಾದ, ಪೂರ್ವ ಪ್ರಾಥಮಿಕ ತರಗತಿ ಕೊಠಡಿಗಳು, ಪ್ರಾಥಮಿಕ ತರಗತಿ ಕೊಠಡಿಗಳು, ಪ್ರೌಢಶಾಲಾ ತರಗತಿ ಕೊಠಡಿಗಳು, ಗಣಕಯಂತ್ರ ಕೊಠಡಿ, ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ, ಕಲೆ, ಕುಶಲ ಮತ್ತು ಸಾಂಸ್ಕೃತಿಕ ಕಲಾ ಕೊಠಡಿ, ಬಾಲಕ ಮತ್ತು ಬಾಲಕಿಯರಿಗೆ ಶೌಚಾಲಯ ಘಟಕ (ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ವಿಭಾಗ), ಬಾಲಕ ಮತ್ತು ಬಾಲಕಿಯರಿಗೆ ಶೌಚಾಲಯ ಘಟಕ (ಪ್ರೌಢ ವಿಭಾಗ), ಕುಡಿಯುವ ನೀರಿನ ಘಟಕ, CWSN ಶೌಚಾಲಯಗಳ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಲೆಕ್ಕಶೀರ್ಷಿಕೆ: 4202-01-201-1-06-133ರಡಿ ರೂ.5000.00 ಲಕ್ಷಗಳಲ್ಲಿ, 38 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ 40 ಕರ್ನಾಟಕ ಪಬ್ಲಿಕ್ ಶಾಲೆ(ಕೆ.ಪಿ.ಎಸ್)ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಿಯಾಯೋಜನೆಗೆ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 49 ಎಸ್‌ಡಿಪಿ 2022, ದಿನಾಂಕ:24.01.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **2022-23ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕರ್ನಾಟಕ ಪಬ್ಲಿಕ್ ಶಾಲೆಯ ಲೆಕ್ಕಶೀರ್ಷಿಕೆ:**

**4202-01-201-1-06-133ರಡಿ ರೂ.5000.00 ಲಕ್ಷಗಳಲ್ಲಿ (ಐದು ಸಾವಿರ ಲಕ್ಷಗಳು ಮಾತ್ರ) ಅನುದಾನಕ್ಕೆ** ಅನುಬಂಧದಲ್ಲಿರುವ ಕ್ರಿಯಾಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆ.

**ಷರತ್ತುಗಳು:-**

1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/38/ಉಕಾ(ಆ&ಸಂ)/2022, ದಿನಾಂಕ:13.12.2022ರಂತೆ ಕ್ರಮವಹಿಸುವುದು. (ಪ್ರತಿ ಲಗತ್ತಿಸಿದೆ)
2. ಈ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಅಂದಾಜು ತಯಾರಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.
3. ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ 1999 ನಿಯಮ 2000 ರನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಹಾಗೂ ಕೆಟಿಪಿಪಿ ಕಾಯ್ದೆಯ ಷರತ್ತುಗಳು ಉಲ್ಲಂಘನೆಯಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೇರ ಹೊಣೆಯಾಗಿರುತ್ತಾರೆ.
4. ಅನುಮೋದನೆಯಾದ ಕಾಮಗಾರಿಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
5. ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಅಂದಾಜು ಮಿತಿಯಲ್ಲಿಯೇ (ಟೆಂಡರ್ ಪ್ರಿಮೀಯಂ ಸೇರಿ) ಅನುಷ್ಠಾನಗೊಳಿಸುವುದು.
6. ಕಾಮಗಾರಿಗಳ ಪ್ರಗತಿ ವರದಿಯನ್ನು ನಿಯಮಿತವಾಗಿ ಪ್ರತಿ ಮಾಹೆ 15ನೇ ತಾರಿಖಿನೊಳಗೆ ಯೋಜನಾ ಇಲಾಖೆಗೆ ಸಲ್ಲಿಸುವುದು.
7. ಈ ಆದೇಶವು ಸರ್ಕಾರವು ಆಯಾ ಸಂದರ್ಭದಲ್ಲಿ ಹೊರಡಿಸುವ ಆದೇಶ ಮತ್ತು ಸುತ್ತೋಲೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಹಾಗೂ ಪದನಿಮಿತ್ತ ಸರ್ಕಾರದ ಉಪ
ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು (ಲೆಕ್ಕ ಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿರವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

# <u>ಅನುಬಂಧ</u>

**2022-23ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಭೂತ ಸೌರ್ಕರ್ಯಗಳಿಗೆ ಈ ಕೆಳಗಿನಂತೆ ಅನುಮೋದನೆ ನೀಡಲಾಗಿದೆ.**

| ಕ್ರ. ಸಂ. | ಜಿಲ್ಲೆ | ತಾಲೂಕು | ಕೆ.ಪಿ.ಎಸ್ ಹೆಸರು | 2022-23ನೇ ಸಾಲಿನ ಅನುದಾನ |
|---|---|---|---|---|
| 1 | ಕಲ್ಬುರ್ಗಿ | ಅಫಜಲಪುರ | | |
| 2 | ಕಲ್ಬುರ್ಗಿ | ಆಳಂದ | | |
| 3 | ಕಲ್ಬುರ್ಗಿ | ಕಮಲಾಪುರ | | |
| 4 | ಕಲ್ಬುರ್ಗಿ | ಕಾಳಗಿ | | |
| 5 | ಕಲ್ಬುರ್ಗಿ | ಚಿಂಚೋಳಿ | ಕೆ.ಪಿ.ಎಸ್ ಸುಲೇಪೇಟ್ | 111.55 |
| 6 | ಕಲ್ಬುರ್ಗಿ | ಚಿತ್ತಾಪುರ | ಕೆ.ಪಿ.ಎಸ್ ಮಾಡಬೂಳ | 181.50 |
| 7 | ಕಲ್ಬುರ್ಗಿ | ಜೇವರ್ಗಿ | | |
| 8 | ಕಲ್ಬುರ್ಗಿ | ಯಡ್ರಾಮಿ | | |
| 9 | ಕಲ್ಬುರ್ಗಿ | ಶಹಬಾಧ | | |
| 10 | ಕಲ್ಬುರ್ಗಿ | ಸೇಡಮ್ | | |
| **ಕಲ್ಬುರ್ಗಿ ಜಿಲ್ಲೆಯ ಒಟ್ಟು** | | | | **293.05** |
| 11 | ಕೊಪ್ಪಳ | ಕನಕಗಿರಿ | | |
| 12 | ಕೊಪ್ಪಳ | ಕಾರಟಗಿ | | |
| 13 | ಕೊಪ್ಪಳ | ಕುಕನೂರು | | |
| 14 | ಕೊಪ್ಪಳ | ಕುಷ್ಟಗಿ | ಕೆ.ಪಿ.ಎಸ್ ಹನಮಸಾಗರ | 93.05 |
| 15 | ಕೊಪ್ಪಳ | ಕೊಪ್ಪಳ | ಕೆ.ಪಿ.ಎಸ್ ಇರಕಲ್‌ಗಡಾ | 169.70 |
| 16 | ಕೊಪ್ಪಳ | ಗಂಗಾವತಿ | ಕೆ.ಪಿ.ಎಸ್ ಕನಕಗಿರಿ | 188.15 |
| 17 | ಕೊಪ್ಪಳ | ಯಲಬುರ್ಗಾ | ಕೆ.ಪಿ.ಎಸ್ ಬಂಡಿ | 93.05 |
| | | | ಕೆ.ಪಿ.ಎಸ್ ಮಂಗಳೂರು | 99.75 |
| **ಕೊಪ್ಪಳ ಜಿಲ್ಲೆಯ ಒಟ್ಟು** | | | | **643.70** |
| 18 | ಗದಗ | ಗಜೇಂದ್ರಗಡ | | |
| 19 | ಗದಗ | ಗದಗ | ಕೆ.ಪಿ.ಎಸ್ ಸೂರಟೂರ | 81.25 |
| 20 | ಗದಗ | ನರಗುಂದ | ಕೆ.ಪಿ.ಎಸ್ ಚಿಕ್ಕನರಗುಂದ | 151.20 |
| 21 | ಗದಗ | ಮುಂಡರಗಿ | ಕೆ.ಪಿ.ಎಸ್ ಡೋಣಿ | 181.50 |
| 22 | ಗದಗ | ರೋಣ | | |
| 23 | ಗದಗ | ಲಕ್ಷ್ಮೇಶ್ವರ | | |
| 24 | ಗದಗ | ಶಿರಹಟ್ಟಿ | ಕೆ.ಪಿ.ಎಸ್ ಬೆಳ್ಳಟ್ಟಿ | 181.50 |
| **ಗದಗ ಜಿಲ್ಲೆಯ ಒಟ್ಟು** | | | | **595.45** |

| ಕ್ರ. ಸಂ. | ಜಿಲ್ಲೆ | ತಾಲೂಕು | ಕೆ.ಪಿ.ಎಸ್ ಹೆಸರು | 2022–23ನೇ ಸಾಲಿನ ಅನುದಾನ |
|---|---|---|---|---|
| 25 | ಚಾಮರಾಜನಗರ | ಗುಂಡ್ಲುಪೇಟೆ | | |
| 26 | ಚಾಮರಾಜನಗರ | ಚಾಮರಾಜನಗರ | | |
| 27 | ಚಾಮರಾಜನಗರ | ಯಳಂದೂರು | | |
| ಚಾಮರಾಜನಗರ ಜಿಲ್ಲೆಯ ಒಟ್ಟು | | | | |
| 28 | ಚಿಕ್ಕಬಳ್ಳಾಪುರ | ಗೌರಿಬಿದನೂರು | | |
| 29 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಕೆ.ಪಿ.ಎಸ್ ಚೇಳೂರು | 104.85 |
| **ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು** | | | | **104.85** |
| 30 | ಧಾರವಾಡ | ಅಣ್ಣಿಗೇರಿ | | |
| 31 | ಧಾರವಾಡ | ಕಲ್ಘಟಗಿ | | |
| 32 | ಧಾರವಾಡ | ಕುಂದಗೋಳ | ಕೆ.ಪಿ.ಎಸ್ ಗುಡಗೇರಿ | 181.50 |
| 33 | ಧಾರವಾಡ | ನವಲಗುಂದ | | |
| **ಧಾರವಾಡ ಜಿಲ್ಲೆಯ ಒಟ್ಟು** | | | | **181.50** |
| 34 | ಬಳ್ಳಾರಿ | ಕಂಪ್ಲಿ | | |
| 35 | ಬಳ್ಳಾರಿ | ಕುರುಗೋಡು | | |
| 36 | ಬಳ್ಳಾರಿ | ಕೂಡ್ಲಿಗಿ | ಕೆ.ಪಿ.ಎಸ್ ಗುಡೇಕೋಟೆ | 123.35 |
| 37 | ಬಳ್ಳಾರಿ | ಕೊಟ್ಟೂರು | | |
| 38 | ಬಳ್ಳಾರಿ | ಬಳ್ಳಾರಿ | ಕೆ.ಪಿ.ಎಸ್ ಬಳ್ಳಾರಿ | 93.05 |
| 39 | ಬಳ್ಳಾರಿ | ಸಂಡೂರು | ಕೆ.ಪಿ.ಎಸ್ ಬಂಡ್ರಿ | 128.20 |
| 40 | ಬಳ್ಳಾರಿ | ಸಿರಗುಪ್ಪ | | |
| 41 | ಬಳ್ಳಾರಿ | ಹಗರಿಬೊಮ್ಮನಹಳ್ಳಿ | ಕೆ.ಪಿ.ಎಸ್ ಕೋಗಲಿ | 93.05 |
| 42 | ಬಳ್ಳಾರಿ | ಹಡಗಲಿ | | |
| 43 | ಬಳ್ಳಾರಿ | ಹರಪನಹಳ್ಳಿ | | |
| 44 | ಬಳ್ಳಾರಿ | ಹೊಸಪೇಟೆ | ಕೆ.ಪಿ.ಎಸ್ ಗಾಡಿಗನೂರು | 109.10 |
| **ಬಳ್ಳಾರಿ ಜಿಲ್ಲೆಯ ಒಟ್ಟು** | | | | **546.75** |
| 45 | ಬಾಗಲಕೋಟೆ | ಜಮಖಂಡಿ | ಕೆ.ಪಿ.ಎಸ್ ಮೈಗೂರ | 111.55 |
| 46 | ಬಾಗಲಕೋಟೆ | ಬಿಳಗಿ | ಕೆ.ಪಿ.ಎಸ್ ರೊಳ್ಳಿ | 95.40 |
| 47 | ಬಾಗಲಕೋಟೆ | ಮುಧೋಳ | ಶ್ರೀ ಶಿವಲಿಂಗಪ್ಪ ಬಸಪ್ಪ ಹೊರಟ್ಟಿ, ಕರ್ನಾಟಕ ಪಬ್ಲಿಕ ಶಾಲೆ, ಯಡಹಳ್ಳಿ | 79.10 |
| 48 | ಬಾಗಲಕೋಟೆ | ರಬಕವಿ ಬನಹಟ್ಟಿ | | |
| **ಬಾಗಲಕೋಟೆ ಜಿಲ್ಲೆಯ ಒಟ್ಟು** | | | | **286.05** |
| 49 | ಬೀದರ್ | ಔರಾದ್ | | |

| ಕ್ರ. ಸಂ. | ಜಿಲ್ಲೆ | ತಾಲೂಕು | ಕೆ.ಪಿ.ಎಸ್ ಹೆಸರು | 2022–23ನೇ ಸಾಲಿನ ಅನುದಾನ |
|---|---|---|---|---|
| 50 | ಬೀದರ್ | ಕಮಲಾನಗರ | | |
| 51 | ಬೀದರ್ | ಚಿತ್ತಗುಪ್ಪಾ | | |
| 52 | ಬೀದರ್ | ಬಸವಕಲ್ಯಾಣ | | |
| 53 | ಬೀದರ್ | ಬೀದರ್ | ಕೆ.ಪಿ.ಎಸ್ ಮನ್ನಳ್ಳಿ | 140.40 |
| 54 | ಬೀದರ್ | ಭಾಲ್ಕಿ | ಕೆ.ಪಿ.ಎಸ್ ಹಲಬರ್ಗಾ | 104.85 |
| 55 | ಬೀದರ್ | ಹುಮ್ನಾಬಾದ್ | | |
| 56 | ಬೀದರ್ | ಹುಲಸೂರು | | |
| **ಬೀದರ್ ಜಿಲ್ಲೆಯ ಒಟ್ಟು** | | | | **245.25** |
| 57 | ಬೆಳಗಾವಿ | ಖಾನಾಪುರ | ಕೆ.ಪಿ.ಎಸ್ ಮುಗಳಿಹಾಳ | 74.30 |
| 58 | ಬೆಳಗಾವಿ | ಬೈಲಹೊಂಗಲ | | |
| 59 | ಬೆಳಗಾವಿ | ಸವದತ್ತಿ | ಕೆ.ಪಿ.ಎಸ್ ಯಕ್ಕುಂಡಿ | 36.30 |
| **ಬೆಳಗಾವಿ ಜಿಲ್ಲೆಯ ಒಟ್ಟು** | | | | **110.60** |
| 60 | ಮೈಸೂರು | ನಂಜನಗೂಡು | | |
| 61 | ಮೈಸೂರು | ಸರಗೂರು | | |
| 62 | ಮೈಸೂರು | ಹೆಗ್ಗಡದೇವನಕೋಟೆ | ಕೆ.ಪಿ.ಎಸ್ ಬಿ.ಮಟ್ಟಿಕೆರೆ | 181.50 |
| **ಮೈಸೂರು ಜಿಲ್ಲೆಯ ಒಟ್ಟು** | | | | **181.50** |
| 63 | ಯಾದಗಿರಿ | ಗುರುಮಿಠಕಲ್ | | |
| 64 | ಯಾದಗಿರಿ | ಯಾದಗಿರಿ | | |
| 65 | ಯಾದಗಿರಿ | ವಡಗೇರಾ | | |
| 66 | ಯಾದಗಿರಿ | ಶಹಾಪುರ | | |
| 67 | ಯಾದಗಿರಿ | ಶೋರಾಪುರ | | |
| 68 | ಯಾದಗಿರಿ | ಹುಣಸಿಗಿ | | |
| **ಯಾದಗಿರಿ ಜಿಲ್ಲೆಯ ಒಟ್ಟು** | | | | |
| 69 | ರಾಯಚೂರು | ದೇವದುರ್ಗ | | |
| 70 | ರಾಯಚೂರು | ಮಸ್ಕಿ | ಕೆ.ಪಿ.ಎಸ್ ಮಸ್ಕಿ | 165.20 |
| 71 | ರಾಯಚೂರು | ಮಾನ್ವಿ | | |
| 72 | ರಾಯಚೂರು | ರಾಯಚೂರು | ಕೆ.ಪಿ.ಎಸ್ ಮುನ್ನೂರವಾಡಿ | 92.05 |
| | | | ಕೆ.ಪಿ.ಎಸ್ ಯಾಪಲದಿನ್ನಿ | 111.55 |
| 73 | ರಾಯಚೂರು | ಲಿಂಗಸೂಗೂರು | | |
| 74 | ರಾಯಚೂರು | ಸಿಂಧನೂರು | ಕೆ.ಪಿ.ಎಸ್ ಅಂಭಾಮಠ | 98.75 |
| 75 | ರಾಯಚೂರು | ಸಿರಿವರ | | |

| ಕ್ರ. ಸಂ. | ಜಿಲ್ಲೆ | ತಾಲೂಕು | ಕೆ.ಪಿ.ಎಸ್ ಹೆಸರು | 2022-23ನೇ ಸಾಲಿನ ಅನುದಾನ |
|---|---|---|---|---|
| **ರಾಯಚೂರು ಜಿಲ್ಲೆಯ ಒಟ್ಟು** | | | | **467.55** |
| 76 | ವಿಜಯಪುರ | ಇಂಡಿ | | |
| 77 | ವಿಜಯಪುರ | ಕೊಲ್ಹಾರ | | |
| 78 | ವಿಜಯಪುರ | ಚಡಚಣ | | |
| 79 | ವಿಜಯಪುರ | ಟಿಕೋಟಾ | | |
| 80 | ವಿಜಯಪುರ | ತಾಳಿಕೋಟೆ | | |
| 81 | ವಿಜಯಪುರ | ದೇವರ ಹಿಪ್ಪರಗಿ | | |
| 82 | ವಿಜಯಪುರ | ನಿಡಗುಂದಿ | | |
| 83 | ವಿಜಯಪುರ | ಬಬಲೇಶ್ವರ | ಕೆ.ಪಿ.ಎಸ್ ಅರ್ಜುಣಗಿ | 125.70 |
| 84 | ವಿಜಯಪುರ | ಬಸವನ ಬಾಗೇವಾಡಿ | ಕೆ.ಪಿ.ಎಸ್ ಕೂಡಗಿ | 93.05 |
| 85 | ವಿಜಯಪುರ | ಬಿಜಾಪುರ | ಕೆ.ಪಿ.ಎಸ್ ನಾಗಠಾಣ | 111.55 |
| 86 | ವಿಜಯಪುರ | ಮುದ್ದೇಬಿಹಾಳ | ಕೆ.ಪಿ.ಎಸ್ ರಕ್ಕಸಗಿ | 181.50 |
| 87 | ವಿಜಯಪುರ | ಸಿಂದಗಿ | ಕೆ.ಪಿ.ಎಸ್ ಜಾಲವಾದ | 169.70 |
| **ವಿಜಯಪುರ ಜಿಲ್ಲೆಯ ಒಟ್ಟು** | | | | **681.50** |
| 88 | ಶಿವಮೊಗ್ಗ | ಶಿಕಾರಿಪುರ | ಕೆ.ಪಿ.ಎಸ್ ಹಿತ್ತಲ | 168.65 |
| 89 | ಶಿವಮೊಗ್ಗ | ಸೊರಬ | | |
| **ಶಿವಮೊಗ್ಗ ಜಿಲ್ಲೆಯ ಒಟ್ಟು** | | | | **168.65** |
| 90 | ಹಾವೇರಿ | ಶಿಗ್ಗಾಂವ್ | ಕೆ.ಪಿ.ಎಸ್ ನಾರಾಯಣಪೂರ | 144.50 |
| 91 | ಹಾವೇರಿ | ಸವಣೂರು | ಕೆ.ಪಿ.ಎಸ್ ಸವಣೂರು | 93.05 |
| 92 | ಹಾವೇರಿ | ಹಾನಗಲ್ | ಕೆ.ಪಿ.ಎಸ್ ಆಡೂರು | 144.50 |
| 93 | ಹಾವೇರಿ | ಹಾವೇರಿ | ಕೆ.ಪಿ.ಎಸ್ ಕರ್ಜಗಿ | 111.55 |
| **ಹಾವೇರಿ ಜಿಲ್ಲೆಯ ಒಟ್ಟು** | | | | **493.60** |
| **ಒಟ್ಟು ಮೊತ್ತ** | | | | **5000.00** |

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರಿಂದ ಅನುಮೋದಿಸಲ್ಪಟ್ಟಿದೆ)**

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ/38/ಉಕಾ(ಆ&ಸಂ)/2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:13.12.2022.

**ಅನಧಿಕೃತ ಟಿಪ್ಪಣಿ**

ಅ. ಪ್ರಸಕ್ತ ಆರ್ಥಿಕ ವರ್ಷದ ಆಯವ್ಯಯ ಭಾಷಣದ ಕಂಡಿಕೆ 88ರಲ್ಲಿ ರಾಜ್ಯ ವಿಧಾನ ಮಂಡಲವು ಅನುಮೋದಿಸಿದಂತೆ ನೀತಿ ಆಯೋಗವು ತಿಳಿಸಿರುವ ವಿವಿಧ ಅಭಿವೃದ್ಧಿ ಸೂಚ್ಯಾಂಕದಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಸಾಧನೆ ಮಾಡಿರುವ ತಾಲೂಕುಗಳನ್ನು ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳೆಂದು ಗುರುತಿಸಿ ಈ ತಾಲೂಕುಗಳ ಸಮಗ್ರ ಅಭಿವೃದ್ಧಿ ಮಾಡಲಾಗುವುದು ಎಂದು ಘೋಷಿಸಲಾಗಿದೆ.

ಆ. ಯೋಜನಾ ಇಲಾಖೆಯು ನೀತಿ ಆಯೋಗದ ಸೂಚ್ಯಾಂಕಗಳ ಆಧಾರದ ಮೇಲೆ ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳನ್ನು ಗುರುತಿಸಿ ಸಂಖ್ಯೆ: PDS 27 SDP 2022, ದಿನಾಂಕ 05.07.2022 ರಂದು ಸರ್ಕಾರಿ ಆದೇಶ ಹೊರಡಿಸಿದೆ. ಸಂಬಂಧಿಸಿದ ಇಲಾಖೆಗಳು ಈ ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಿದೆ.

ಇ. ಅಂದಾಜುಗಳ ಸಮಿತಿಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯ ತಾಲೂಕುಗಳ ಬಗ್ಗೆ ಚರ್ಚಿಸಲಾಯಿತು. ಸಮಿತಿಯು ವಿಶೇಷ ಅಭಿವೃದ್ಧಿ ತಾಲೂಕುಗಳಲ್ಲಿ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಮುಂದುವರಿಸಲು ಅನುದಾನದ ಅಲಭ್ಯತೆಯ ಬಗ್ಗೆ ಆತಂಕ ವ್ಯಕ್ತಪಡಿಸಿತು.

ಈ. ಈ ವಿಷಯಗಳ ಕುರಿತಾಗಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಈ ಕೆಳಕಂಡ ನಿರ್ದೇಶನಗಳನ್ನು ಹೊರಡಿಸಲಾಗಿದೆ.

1. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉಪ ಶೀರ್ಷಿಕೆ 133 ರಲ್ಲಿ ಒದಗಿಸಿರುವ ಅನುದಾನವನ್ನು ನೀತಿ ಆಯೋಗವು ಸೂಚಿಸಿರುವ 49 ಸೂಚ್ಯಾಂಕಗಳ ಆಧಾರದ ಮೇಲೆ ಗುರುತಿಸಿರುವ ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.

2. ವಿಶೇಷ ಅಭಿವೃದ್ಧಿ ಯೋಜನೆಯಡಿ (SDP) ಚಾಲ್ತಿಯಲ್ಲಿರುವ ಕಾಮಗಾರಿಗಳಿಗೆ ಬೇಕಾಗಿರುವ ಅನುದಾನವನ್ನು ಸಂಬಂಧಿಸಿದ ಇಲಾಖೆಯ ಸಾಮಾನ್ಯ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗುವುದು ಹಾಗೂ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ಎಲ್ಲಾ ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.

3. ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಲ್ಲಿ ಸೇರಿರದ SDP ತಾಲೂಕುಗಳಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತಾಗಿ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಹಾಗೂ ಸಚಿವ ಸಂಪುಟ ಸಭೆಯ ನಿರ್ಧಾರದ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು.

(ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಅನುಮೋದಿಸಲ್ಪಟ್ಟಿದೆ)

(ಐ.ಎಸ್.ಎನ್. ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.